**DW-1** OS279/2022

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ: 279/2022**

**ಪಿ.ಡಬ್ಲೂ:01 ಶ್ರೀ ಕಾರ್ತಿಕೇಯನ್**

**ಸಾಕ್ಷಿಯನ್ನು ದಿನಾಂಕಃ 01-04-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು ಃ ವಾದಿಯ ಪರ ಶ್ರೀ. ಆರ್ ಎಸ್ ಎನ್ ವಕೀಲರಿಂದ**

1. ನಾನು ಐಟಿಐ ಓದಿ ವೆಲ್ಡಿಂಗ್ ಕೆಲಸ ಮಾಡುತ್ತೇನೆ. ವಾದಿಯವರು ನನ್ನ ಮಾವ ಮತ್ತು ಮಾವನ ಮಗಳಾಗಿರುತ್ತಾಳೆ. ವಾದಿಯವರು ನನಗೆ ಸೇರಿದ ಮನೆಯನ್ನು ಅವರ ಮನೆ ಎಂದು ಹೇಳಿ ಈ ದಾವೆಯನ್ನು ಹೂಡಿರುತ್ತಾರೆ. ನನ್ನ ಪ್ರಕಾರ ನನಗೆ ಸೇರಿದ ಮನೆ ಸಂಖ್ಯೆ 20 ಆಗಿರುತ್ತದೆ. 1 ನೇ ವಾದಿಯವರು ಬಿಜಿಎಂಎಲ್ ನಲ್ಲಿ ಮೊದಲು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ಮನೆ ಸಂಖ್ಯೆ 18 ಬಿಜಿಎಂಎಲ್ ನಿಂದ ಅಲಾಟ್ ಆಗಿರುತ್ತದೆ ಎಂದರೆ ಸರಿ. 1 ನೇ ವಾದಿಗೆ ಮನೆ ಸಂಖ್ಯೆ 20 ನ್ನು ಹೆಚ್ಚುವರಿ ಮನೆಯಂತೆ ಬಿಜಿಎಂಎಲ್ ರವರು ಅಲಾಟ್ ಮಾಡಿದ್ದು ಅದಕ್ಕೆ ಸಂಬಂದ ಪಟ್ಟ ದಾಖಲೆಗಳನ್ನು ಅವರು ಈಗಾಗಲೇ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

2. ನಿಪಿ7 ದಾಖಲೆಯನ್ನು ವಾದಿಯವರಿಗೆ ಬಿಜಿಎಂಎಲ್ ರವರು ಮನೆ ಸಂಖ್ಯೆ 20 ಕ್ಕೆ ಸಂಬಂದ ಪಟ್ಟಂತೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ವಾದಿಯವರು ಸೃಷ್ಟಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ವಾದಿಯವರಿಗೆ ಸಂಬಂದ ಪಟ್ಟಂತೆ ಬಿ ಷೆಡ್ಯೂಲ್ ಆಸ್ತಿ ಆದ ಮನೆ ಸಂಖ್ಯೆ 20 ಕ್ಕೆ ಸಂಬಂದ ಪಟ್ಟಂತೆ 1 ನೇ ವಾದಿಯ ವೇತನದಲ್ಲಿ ಬಾಡಿಗೆಯನ್ನು ಬಿಜಿಎಂಎಲ್ ರವರು ಖಡಿತಗೊಳಿಸುತ್ತಿದ್ದರು ಎಂದರೆ ಸರಿಯಲ್ಲ. ಮನೆ ಸಂಖ್ಯೆ 20 ರಲ್ಲಿ 2 ನೇ ವಾದಿಯವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಮನೆ ಸಂಖ್ಯೆ 20 ನ್ನು ಕಟ್ಟಿರುತ್ತೇನೆ ಎನ್ನುತ್ತಾರೆ. ಸದರಿ 2 ನೇ ವಾದಿಯವರು ಬಿ ಷೆಡ್ಯೂಲ್ ಮನೆ ಆದ 20 ಅವರಿಗೆ ಅಲಾಟ್ ಆದ ನಂತರದಿಂದ ಇಲ್ಲಿಯವರೆಗೆ ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು 2 ನೇ ವಾದಿಗೆ ಬಿ ಷೆಡ್ಯೂಲ್ ಆಸ್ತಿಯು ಅಲಾಟ್ ಆಗಿಲ್ಲ ಎನ್ನುತ್ತಾರೆ.

3. ಸದರಿ ಮನೆ ಸಂಖ್ಯೆ 20 ರಲ್ಲಿ ನಾನು ವಾಸ ಮಾಡುತ್ತಿದ್ದೇನೆ. ಈ ದಾವೆಗೆ ಸಂಬಂದ ಪಟ್ಟಂತೆ ಕೋರ್ಟ್ ಕಮಿಷನರ್ ನ್ನು ಮನೆ ಸಂಖ್ಯೆ 20 ಕ್ಕೆ ಸಂಬಂದ ಪಟ್ಟಂತೆ ನೇಮಕಾತಿ ಮಾಡಿದರೆ ನನಗೇನಾದರೂ ಅಭಂತರ ಇದೆಯಾ ಎಂದರೆ ಇಲ್ಲ. ನಿಪಿ1 ನ್ನು ಮನೆ ಸಂಖ್ಯೆ 20 ಕ್ಕೆ ಸಂಬಂದ ಪಟ್ಟಂತೆ ಬಿಜಿಎಂಎಲ್ ರವರು ಸ್ವಾದೀನದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಅದು ಮನೆ ಸಂಖ್ಯೆ 18 ಕ್ಕೆ ಸಂಬಂದ ಪಟ್ಟದ್ದು ಎನ್ನುತ್ತಾರೆ. ಬಿ ಷೆಡ್ಯೂಲ್ ಆಸ್ತಿಯು ಡಿ ಬ್ಲಾಕಿನಲ್ಲಿ ಇದೆ ಎಂದರೆ ಸರಿ. ಸದರಿ ಬಿ ಷೆಡ್ಯೂಲ್ ಆಸ್ತಿಗೆ ಸಂಬಂದ ಪಟ್ಟಂತೆ ವಾಸದ ಪ್ರಮಾಣ ಪತ್ರವನ್ನು ನಿಪಿ3 ರಂತೆ ಡಿ ಬ್ಲಾಕ್ ಪಂಚಾಯತ್ ರವರು ಕೊಟಿರುತ್ತಾರೆ ಎಂದರೆ ಸಾಕ್ಷಿಯು ಸೃಷ್ಟಿ ಮಾಡಿರುತ್ತಾರೆ ಎನ್ನುತ್ತಾರೆ.

4. ಮನೆ ಸಂಖ್ಯೆ 20 ನನ್ನ ಪ್ರಕಾರ ಬಿಜಿಎಂಎಲ್ ರವರು ನನ್ನ ತಂದೆ ಆದ ಸಿ ಅಮಲ್ ದಾಸ್ ರವರಿಗೆ ಹೆಚ್ಚುವರಿ ಆಗಿ ಅಲಾಟ್ ಮಾಡಿರುತ್ತಾರೆ. ಸಾಮಾನ್ಯವಾಗಿ ನನ್ನ ಪ್ರಕಾರ ಬಿಜಿಎಂಎಲ್ ರವರು ಒಬ್ಬ ನೌಕರನಿಗೆ ಒಂದೇ ಮನೆ ಅಲಾಟ್ ಮಾಡುವುದು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮಗೆ ಬಿಜಿಎಂಎಲ್ ರವರು ಒಂದು ಮನೆಯನ್ನು ಹಿಂತಿರುಗಿಸುವಂತೆ ಹೇಳಿ ಲೆಟರ್ ನೀಡಿರುತ್ತಾರೆ ಎನ್ನುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀರಲು ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**